All India Radio: Bangalore
National Bulletin In Kannada
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
05.12.2025 7.35 a.m.
<><><*><><<>

ಮುಖ್ಯಾಂಶಗಳು

೧. ನವದೆಹಲಿಯಲ್ಲಿಂದು ಪ್ರಧಾನಿ ನರೇಂದ್ರ ಮೋದಿ-ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮಾತುಕತೆ

೨. ಇಂದು ದ್ವೈಮಾಸಿಕ ಹಣಕಾಸು ನೀತಿಯನ್ನು ಪ್ರಕಟಿಸಲಿರುವ ಭಾರತೀಯ ರಿಸರ್ವ್ ಬ್ಯಾಂಕ್

೩. ವಿಮಾನಯಾನ ಅಡಚಣೆಗಳ ಕುರಿತು ನಾಗರಿಕ ವಿಮಾನಯಾನ ನಿರ್ದೇಶನಾಲಯ ಪರಿಶೀಲನಾ ಸಭೆ

೪. ಹೆಚ್ಚಿನ ಸೌರ ಕೃಷಿ ಪಂಪ್‌ಗಳನ್ನು ಸ್ಥಾಪಿಸುವ ಮೂಲಕ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿದ ಮಹಾರಾಷ್ಟ್ರ

೫.ಎಚ್‌ಸಿಎಲ್ ಸ್ಕ್ವ್ಯಾಷ್ ಇಂಡಿಯನ್ ಟೂರ್ ೪ ಪಂದ್ಯಾವಳಿ; ಪುರುಷ ಹಾಗೂ ಮಹಿಳಾ ವಿಭಾಗದ ಫೈನಲ್‌ನಲ್ಲಿಂದು ಭಾರತೀಯ ಕ್ರೀಡಾಪಟುಗಳು ಕಣದಲ್ಲಿ

<><><*><><<>

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ನವದೆಹಲಿಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಉಭಯ ನಾಯಕರು ದ್ವಿಪಕ್ಷೀಯ ಸಂಬಂಧಗಳಲ್ಲಿನ ಪ್ರಗತಿಯನ್ನು ಪರಿಶೀಲಿಸಲಿದ್ದಾರೆ ಮತ್ತು ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ. ಮಾತುಕತೆಯ ನಂತರ, ವ್ಯಾಪಾರ, ಆರ್ಥಿಕತೆ, ಆರೋಗ್ಯ ರಕ್ಷಣೆ, ಶಿಕ್ಷಣ, ಸಂಸ್ಕೃತಿ ಮತ್ತು ಮಾಧ್ಯಮಕ್ಕೆ ಸಂಬಂಧಿಸಿದ ಕ್ಷೇತ್ರಗಳು ಸೇರಿದಂತೆ ಹಲವು ಒಪ್ಪಂದಗಳಿಗೆ ಸಹಿ ಹಾಕಲಾಗುವ ನಿರೀಕ್ಷೆಯಿದೆ. ೨೩ನೇ ಭಾರತ-ರಷ್ಯಾ ವಾರ್ಷಿಕ ಶೃಂಗಸಭೆಯಲ್ಲಿ ಭಾಗಹಿಸಲು ಭಾರತಕ್ಕೆ ಭೇಟಿ ನೀಡಿರುವ ಅಧ್ಯಕ್ಷ ಪುಟಿನ್ ನಿನ್ನೆ ಸಂಜೆ ನವದೆಹಲಿಗೆ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಪ್ರಧಾನಿ ನರೇಂದ್ರ ಮೋದಿ, ಆತ್ಮೀಯವಾಗಿ ಬರಮಾಡಿಕೊಂಡರು. ರಷ್ಯಾ ಅಧ್ಯಕ್ಷರಿಗೆ ಇಂದು ಬೆಳಿಗ್ಗೆ ರಾಷ್ಟ್ರಪತಿ ಭವನದಲ್ಲಿ ಸಾಂಪ್ರದಾಯಿಕ ಸ್ವಾಗತ ಕೋರಲಾಗುವುದು. ಬಳಿಕ ಅಧ್ಯಕ್ಷ ಪುಟಿನ್ ರಾಜ್‌ಘಾಟ್‌ನಲ್ಲಿ ಮಹಾತ್ಮ ಗಾಂಧಿಜೀಯವರಿಗೆ ಪುಷ್ಪ ನಮನ ಸಲ್ಲಿಸಲಿದ್ದಾರೆ. ಸಂಜೆ,

ರಾಷ್ಟ್ರಪತಿ ದ್ರೌಪದಿ ಮುರ್ಮು, ರಷ್ಯಾ ಅಧ್ಯಕ್ಷರ ಗೌರವಾರ್ಥವಾಗಿ ಔತಣಕೂಟವನ್ನು ಆಯೋಜಿಸಲಿದ್ದಾರೆ. ಭಾರತ ಮತ್ತು ರಷ್ಯಾ ತಮ್ಮ ಕಾರ್ಯತಂತ್ರದ ಪಾಲುದಾರಿಕೆ ಘೋಷಣೆಯ ೨೫ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿವೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಕಳೆದ ಹನ್ನೊಂದು ವರ್ಷಗಳಲ್ಲಿ, ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ೧೯ ಬಾರಿ ಭೇಟಿಯಾಗಿದ್ದಾರೆ. ವಾರ್ಷಿಕ ಶೃಂಗಸಭೆಯು ಎರಡೂ ದೇಶಗಳ ನಡುವಿನ ಅತ್ಯುನ್ನತ ಸಾಂಸ್ಥಿಕ ಸಂವಾದ ಕಾರ್ಯವಿಧಾನವಾಗಿದೆ. ಪ್ರಧಾನಿ ಅವರು ಕಳೆದ ವರ್ಷ ಜುಲೈನಲ್ಲಿ ರಷ್ಯಾದ ಅತ್ಯುನ್ನತ ರಾಜ್ಯ ಗೌರವವಾದ ಆರ್ಡರ್ ಆಫ್ ದಿ ಹೋಲಿ ಅಪೋಸ್ತಲ್ ಆಂಡ್ರ್ಯೂ ದಿ ಫಸ್ಟ್ ಅನ್ನು ಪಡೆದರು.

೨೦೨೪-೨೫ರಲ್ಲಿ ದ್ವಿಪಕ್ಷೀಯ ವ್ಯಾಪಾರ ೬೮ ಶತಕೋಟಿ ಡಾಲರ್‌ಗಳಿಗಿಂತ ಹೆಚ್ಚಿನ ದಾಖಲೆಯ ಗರಿಷ್ಠ ಮಟ್ಟದಲ್ಲಿತ್ತು. ೨೦೩೦ ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರವನ್ನು ೧೦೦ ಶತಕೋಟಿ ಡಾಲರ್‌ಗಳಿಗೆ ಹೆಚ್ಚಿಸುವ ಗುರಿಯನ್ನು ಉಭಯ ನಾಯಕರು ಹೊಂದಿದ್ದಾರೆ. ಭಾರತದ ಮೊದಲ ಮಾನವ ಬಾಹ್ಯಾಕಾಶ ಹಾರಾಟ ಕಾರ್ಯಕ್ರಮವಾದ ಗಗನಯಾನ ಮಿಷನ್‌ನಲ್ಲಿ ಎರಡೂ ದೇಶಗಳು ನಿಕಟವಾಗಿ ಸಹಕರಿಸುತ್ತಿವೆ. ಇತ್ತೀಚೆಗೆ ಕಝಾನ್ ಮತ್ತು ಯೆಕಟೆರಿನ್‌ಬರ್ಗ್‌ನಲ್ಲಿ ಭಾರತದ ದೂತಾವಾಸ ಕಚೇರಿಗಳನ್ನು ಉದ್ಘಾಟಿಸಲಾಯಿತು. ಅಧ್ಯಕ್ಷ ಪುಟಿನ್ ಅವರ ಭೇಟಿಯು ಭಾರತ ಮತ್ತು ರಷ್ಯಾದ ರಾಷ್ಟ್ರಗಳ ನಡುವಿನ ವಿಶೇಷ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಅವಕಾಶವನ್ನು ಒದಗಿಸುತ್ತದೆ.

<>><><*><><<>

ಭಾರತ-ರಷ್ಯಾ ಸಹಯೋಗ ಯಾವುದೇ ದೇಶದ ವಿರುದ್ಧವಲ್ಲ ಬದಲಿಗೆ ಅದು ಎರಡೂ ರಾಷ್ಟ್ರಗಳ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡುವ ಗುರಿಯನ್ನು ಹೊಂದಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಹೇಳಿದ್ದಾರೆ.

ಇಂಧನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಭಾರತ-ರಷ್ಯಾ ನಿಕಟ ಸಂಬಂಧಗಳನ್ನು ಗಮನದಲ್ಲಿಟ್ಟುಕೊಂಡು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾರತದ ಬೆಳೆಯುತ್ತಿರುವ ಪಾತ್ರವನ್ನು ಕೆಲವರು ಇಷ್ಟಪಡುವುದಿಲ್ಲ ಹಾಗೂ ರಾಜಕೀಯ ಕಾರಣಗಳಿಗಾಗಿ ಭಾರತದ ಪ್ರಭಾವವನ್ನು ನಿರ್ಬಂಧಿಸಲು ಗುರಿಯನ್ನು ಹೊಂದಿವೆ ಎಂದು ಅಧ್ಯಕ್ಷ ಪುಟಿನ್ ತಿಳಿಸಿದರು. ತಮ್ಮ ೨ ದಿನಗಳ ಭಾರತ ಭೇಟಿಗೆ ಮುಂಚಿತವಾಗಿ ಟಿವಿ ವಾಹಿನಿಯೊಂದಿಗೆ ಮಾತನಾಡಿದ ಅವರು,ರಷ್ಯಾ ಇಂಧನವನ್ನು ಖರೀದಿಸುವ ಹಕ್ಕನ್ನು ಅಮೆರಿಕ ಹೊಂದಿದ್ದರೆ, ಭಾರತಕ್ಕೆ ಅದೇ ಸವಲತ್ತು ಏಕೆ ಇರಬಾರದು ಎಂದು ಪ್ರಶ್ನಿಸಿದರು. ಪ್ರಧಾನಿ ನರೇಂದ್ರ ಮೋದಿ ಸುಲಭವಾಗಿ

ಒತ್ತಡಕ್ಕೆ ಮಣಿಯುವ ವ್ಯಕ್ತಿಯಲ್ಲ ಮತ್ತು ಭಾರತೀಯ ಜನರು ತಮ್ಮ ನಾಯಕನ ಬಗ್ಗೆ ಹೆಮ್ಮೆ ಪಡಬೇಕು ಎಂದು ಅವರು ತಿಳಿಸಿದರು.

<>><><*><><<>

ಭಾರತೀಯ ರಿಸರ್ವ್ ಬ್ಯಾಂಕ್ ಇಂದು ತನ್ನ ದ್ವೈಮಾಸಿಕ ಹಣಕಾಸು ನೀತಿಯನ್ನು ಪ್ರಕಟಿಸಲಿದೆ. ಆರ್‌ಬಿಐನ ಹಣಕಾಸು ನೀತಿ ಸಮಿತಿ-ಎಂಪಿಸಿ ಈ ತಿಂಗಳ ೩ರಂದು ಮುಂಬೈನಲ್ಲಿ ತನ್ನ ಮೂರು ದಿನಗಳ ಚರ್ಚೆಯನ್ನು ಆರಂಭಿಸಿತ್ತು. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಇಂದು ಬೆಳಿಗ್ಗೆ ಸಭೆಯ  ನಿರ್ಧಾರವನ್ನು ಪ್ರಕಟಿಸಲಿದ್ದಾರೆ. ಬಡ್ಡಿದರಗಳಲ್ಲಿ ೨೫ ಮೂಲಾಂಶ ಕಡಿತ ಮಾಡುವ ಸಾಧ್ಯತೆಯಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಹಣದುಬ್ಬರ ಕುಸಿತ ಮತ್ತು ಜಿಡಿಪಿ ಬೆಳವಣಿಗೆಯ ಏರಿಕೆಯ ಹಿನ್ನೆಲೆಯಲ್ಲಿ ಸಭೆ ನಡೆಯುತ್ತಿದೆ.

<>><><*><><<>

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದಿನಿಂದ ಮೂರು ದಿನಗಳ ಗುಜರಾತ್ ಪ್ರವಾಸ ಕೈಗೊಂಡಿದ್ದಾರೆ.

ತಮ್ಮ ಒಂದು ದಿನದ ಭೇಟಿಯ ಸಮಯದಲ್ಲಿ ಅವರು, ಅಹಮದಾಬಾದ್, ಗಾಂಧಿನಗರ, ವಾವ್ ಥರಾದ್ ಮತ್ತು ಬನಸ್ಕಾಂತದಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಅಹ್ಮದಾಬಾದ್ ಮಹಾನಗರ ಪಾಲಿಕೆಯ ಹಲವಾರು ಪ್ರಮುಖ ಮೂಲಸೌಕರ್ಯ ಮತ್ತು ಸಾರ್ವಜನಿಕ ಸೌಲಭ್ಯ ಯೋಜನೆಗಳನ್ನು ಸಚಿವರು ಉದ್ಘಾಟಿಸುವ ನಿರೀಕ್ಷೆಯಿದೆ.

<>><><*><><<>

ನವೆಂಬರ್ ೨೦೨೫ ರ ಅಂತ್ಯದಿಂದ ವಿಮಾನಯಾನ ಸಂಸ್ಥೆಯು ತನ್ನ ಜಾಲದಲ್ಲಿ ಪ್ರಮುಖ ಅಡಚಣೆಗಳ ಬಗ್ಗೆ ವರದಿ ಮಾಡಿದ ನಂತರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಮತ್ತು ನಾಗರಿಕ ವಿಮಾನಯಾನ ಸಚಿವಾಲಯದ ಹಿರಿಯ ಅಧಿಕಾರಿಗಳೊಂದಿಗೆ ಮತ್ತು ಇಂಡಿಗೋದ ಉನ್ನತಾಧಿಕಾರಿಗಳೊಂದಿಗೆ ನಾಗರಿಕ ವಿಮಾನಯಾನ ನಿರ್ದೇಶನಾಲಯ-ಡಿಜಿಸಿಎ ಪರಿಶೀಲನಾ ಸಭೆಯನ್ನು ನಡೆಸಿದೆ.  ವಿಮಾನಯಾನ ಸಂಸ್ಥೆಯು ದಿನಕ್ಕೆ ಸುಮಾರು ೧೭೦-೨೦೦ ವಿಮಾನಗಳನ್ನು ರದ್ದುಗೊಳಿಸುತ್ತಿದೆ, ಇದು ಸಾಮಾನ್ಯ ಮಟ್ಟಕ್ಕಿಂತ ಹೆಚ್ಚಿನದ್ದಾಗಿದೆ.  ಹೊಸ ನಿಯಂತ್ರಕ ಅವಶ್ಯಕತೆಗಳಿಗೆ ಸುಗಮ ಪರಿವರ್ತನೆಯನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ಪೂರ್ವಸಿದ್ಧತಾ ಸಮಯ ಲಭ್ಯವಿತ್ತಾದರೂ ವಿಮಾನಯಾನ ಸಂಸ್ಥೆಯು ಪರಿಸ್ಥಿತಿಯನ್ನು ನಿಭಾಯಿಸಿದ ವಿಧಾನದ ಕುರಿತು ಸಚಿವರು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

<>><><*><><<>

ಮಹಾರಾಷ್ಟ್ರವು ರಾಜ್ಯದ ಪ್ರಮುಖ ಯೋಜನೆಯಾದ 'ಮಗೆಲ್ ತ್ಯಾಲ ಸೋಲಾರ್ ಕೃಷಿಪಂಪ್' ಯೋಜನೆಯಡಿಯಲ್ಲಿ ಒಂದೇ ತಿಂಗಳಲ್ಲಿ ೪೫ ಸಾವಿರದ ೯೧೧ ಸೌರ ಕೃಷಿ ಪಂಪ್‌ಗಳನ್ನು

ಸ್ಥಾಪಿಸುವ ಮೂಲಕ ಗಿನ್ನೆಸ್ ವಿಶ್ವ ದಾಖಲೆಯನ್ನು ನಿರ್ಮಿಸಿದೆ. ಇಂದು ಛತ್ರಪತಿ ಸಂಭಾಜಿನಗರದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರ ಸಮ್ಮುಖದಲ್ಲಿ ಅಧಿಕೃತ ಗಿನ್ನೆಸ್ ವಿಶ್ವ ದಾಖಲೆ ಪ್ರಮಾಣಪತ್ರವನ್ನು ನೀಡಲಾಗುವುದು.

ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಮಹಾರಾಷ್ಟ್ರ ದೇಶದಲ್ಲೇ ಮುಂಚೂಣಿಯಲ್ಲಿದೆ, ಇದು ರೈತರಿಗೆ ವೆಚ್ಚದ ಕೇವಲ ಶೇಕಡಾ ೧೦ ಪಾವತಿಸುವ ಮೂಲಕ ಸಂಪೂರ್ಣ ಸೌರ ಪಂಪ್ ಸೆಟ್ ಅನ್ನು ಒದಗಿಸುತ್ತದೆ. ಕೇಂದ್ರ ಸರ್ಕಾರ ಶೇಕಡಾ ೩೦ ರಷ್ಟು ಸಬ್ಸಿಡಿಯನ್ನು ಮತ್ತು ರಾಜ್ಯ ಸರ್ಕಾರ, ಶೇಕಡಾ ೬೦ ರಷ್ಟು ಸಬ್ಸಿಡಿಯನ್ನು ನೀಡುತ್ತದೆ. ವಿದ್ಯುತ್ ಸಂಪರ್ಕಗಳಿಗಾಗಿ ದೀರ್ಘಕಾಲದಿಂದ ಬಾಕಿ ಇರುವ ಬೇಡಿಕೆಯನ್ನು ನಿವಾರಿಸುವ ಮೂಲಕ ೧೦.೫ ಲಕ್ಷ ಸೌರ ಪಂಪ್‌ಗಳನ್ನು ಸ್ಥಾಪಿಸುವ ಗುರಿಯನ್ನು ರಾಜ್ಯ ಹೊಂದಿದೆ.

<>><><*><><<>

ಎಚ್‌ಸಿಎಲ್ ಸ್ಕ್ವಾಷ್ ಇಂಡಿಯನ್ ಟೂರ್ ೪ ಪಂದ್ಯಾವಳಿಯ ಮಹಿಳಾ ವಿಭಾಗದಲ್ಲಿ ಮಾಜಿ ಮಹಿಳಾ ವಿಶ್ವದ ೧೦ ಶ್ರೇಯಾಂಕಿತ ಜೋಶ್ನಾ ಚಿನಪ್ಪ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತ ಭಾರತದವರೇ ಆದ ಅನಾಹತ್ ಸಿಂಗ್ ಅವರನ್ನು ಎದುರಿಸಲಿದ್ದಾರೆ. ಪುರುಷರ ವಿಭಾಗದಲ್ಲಿ ವೆಲವನ್ ಸೆಂಥಿಲ್‌ಕುಮಾರ್ ಪ್ರಶಸ್ತಿಗಾಗಿ ಸ್ಪರ್ಧಿಸಲಿದ್ದಾರೆ. ಜೋಶ್ನಾ ಆರನೇ ಶ್ರೇಯಾಂಕದ ತನ್ವಿ ಖನ್ನಾ ಅವರನ್ನು ೬-೧೧, ೧೨-೧೦, ೧೧-೧, ೫-೧೧, ೧೧-೫ ಅಂತರದಿಂದ ಸೋಲಿಸಿದರೆ, ಅನಾಹತ್ ದಕ್ಷಿಣ ಆಫ್ರಿಕಾದ ಮೂರನೇ ಶ್ರೇಯಾಂಕದ ಹೇಲಿ ವಾರ್ಡ್ ಅವರನ್ನು ೧೧-೮, ೧೧-೬, ೧೧-೬ ಅಂತರದಿಂದ ಸೋಲಿಸಿದರು. ಪುರುಷರ ವಿಭಾಗದಲ್ಲಿ, ಅಗ್ರ ಶ್ರೇಯಾಂಕದ ಸೆಂಥಿಲ್‌ಕುಮಾರ್ ಫ್ರಾನ್ಸ್‌ನ ಏಳನೇ ಶ್ರೇಯಾಂಕದ ಮಾಸಿಯೊ ಲೆವಿ ಅವರನ್ನು ೧೩-೧೧, ೧೧-೯, ೫-೧೧, ೧೧-೭ ಅಂತರದಿಂದ ಸೋಲಿಸಿ, ಈಜಿಪ್ಟಿನ ಆಡಮ್ ಹವಾಲ್ ಅವರ ವಿರುದ್ಧ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದ್ದಾರೆ.

<>><><*><><<>

ಸಂಘಟಿತ ಅಕ್ರಮ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡು ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ- ಎನ್‌ಐಎ ನಾಲ್ವರನ್ನು ಬಂಧಿಸಿದೆ. ತನಿಖಾ ಸಂಸ್ಥೆಯ ೨೨ ತಂಡಗಳು ಮೂರು ರಾಜ್ಯಗಳಾದ್ಯಂತ ಅನೇಕ ಸ್ಥಳಗಳಲ್ಲಿ ವ್ಯಾಪಕ ಶೋಧ ನಡೆಸಿವೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ 12 ಕ್ಕೆ ><><<>